**OS No. 28/2025.**

Case called out.

**–: <u>ಮಧ್ಯಂತರ ಅರ್ಜಿ ಸಂಖ್ಯೆ 3 ರ ಮೇಲಿನ ಆದೇಶ</u> :–**

ವಾದಿಯು, ಪ್ರತಿವಾದಿಯರ ವಿರುದ್ಧ ಶಾಶ್ವತ ನಿರ್ಬಂಧಕಾಜ್ಞೆ ಪರಿಹಾರವನ್ನು ಕೋರಿ ಈ ದಾವೆಯನ್ನು ಸಲ್ಲಿಸಿರುತ್ತಾರೆ. ಜೊತೆಗೆ ಮಧ್ಯಂತರ ಅರ್ಜಿ ಸಂಖ್ಯೆ 3 ನ್ನು ಸಲ್ಲಿಸಿ ದಾವಾ ವಿಚಾರಣೆ ಮುಗಿಯುವವರೆಗೆ ಅಥವಾ ಮಾನ್ಯ ಉಚ್ಚ ನ್ಯಾಯಾಲಯ ಸಂಚಾರಿ ಪೀಠ ಧಾರವಾಡದಲ್ಲಿ ದಾಖಲಾಗಿರುವ WP No.102328/2022 ಮುಗಿಯುವವರೆಗೆ ದಾವಾ ಸ್ಥಳದಲ್ಲಿ ಕಾಂಪೌಂಡ್ ಗೋಡೆ ನಿರ್ಮಿಸದಂತೆ ಅಥವಾ ಮನೆ ಕಟ್ಟಡ ಕಾಮಗಾರಿ ಮಾಡದಂತೆ , ತಮ್ಮ ಪರವಾಗಿ ತಾತ್ಕಾಲಿಕ ನಿರ್ಭಂದಕಾಜ್ಞೆ ಆದೇಶವನ್ನು ಕೋರಿ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ವಾದಿಯು, ದಾವಾ ಸ್ಥಳದ ಪಹಣಿ ಪತ್ರಿಕೆ, ನಾಲ್ಕು ಫೋಟೋ, ಒಂದು ಸಿ.ಡಿ., WP No.102328/2022 ರ ಪ್ರತಿ ಮತ್ತು ಮ್ಯುಟೇಷನ್ ರಿಜಿಸ್ಟರ್ ನಂ.ಎಚ್47/2024–25 ಹಾಗೂ ಮ್ಯುಟೇಷನ್ ಎಂಟ್ರಿ ನಂ.ಎಚ್122/2024–25 ಪ್ರತಿಗಳನ್ನು ಹಾಜರುಪಡಿಸಿರುತ್ತಾರೆ.

ಮಧ್ಯಂತರ ಅರ್ಜಿ ಸಂಖ್ಯೆ 3 ರ ಮೇಲಿನ ವಾದವನ್ನು ಆಲಿಸಲಾಯಿತು ಮತ್ತು ಸದರಿ ದಾವೆಯಲ್ಲಿನ ದಾಖಲೆಗಳನ್ನು ಮತ್ತು ಪ್ರಮಾಣ ಪತ್ರವನ್ನು ಪರಿಶೀಲಿಸಲಾಯಿತು. ವಾದಿಯು ಹಾಜರುಪಡಿಸಿರುವ ಮ್ಯುಟೇಷನ್ ರಿಜಿಸ್ಟರ್ ನಂ.ಎಚ್47/2024–25 ಹಾಗೂ ಮ್ಯುಟೇಷನ್ ಎಂಟ್ರಿ ನಂ.ಎಚ್122/2024–25 ರ ದಾಖಲೆಗಳನ್ನು ಕೂಲಂಕೂಷವಾಗಿ ಪರಿಶೀಲಿಸಿದಾಗ, ಸದರಿ

ದಾಖಲೆಗಳಲ್ಲಿ ಪ್ರತಿವಾದಿಯರ ಹೆಸರುಗಳು ಕ್ರಯದ ಮೂಲಕ ನಮೂದಾಗಿರುವುದು ಕಂಡು ಬರುತ್ತದೆ. ಆದ್ದರಿಂದ, ಮಧ್ಯಂತರ ಅರ್ಜಿ ಸಂಖ್ಯೆ 3 ರ ಮೇಲೆ ಆದೇಶ ಮಾಡುವುದಕ್ಕಿಂತ ಮೊದಲು ಉಭಯ ಪಕ್ಷಗಾರರನ್ನು ಆಲಿಸುವುದು ಅವಶ್ಯಕತೆ ಇದೆ ಎಂಬ ಅಭಿಪ್ರಾಯಕ್ಕೆ ಮಾನ್ಯ ನ್ಯಾಯಾಲಯವು ಬರುತ್ತದೆ. ಕಛೇರಿಯಲ್ಲಿ ಪರಿಶೀಲಿಸಲಾಯಿತು, ಯಾವುದೇ ಎಚ್ಚರಿಕೆ ಅರ್ಜಿ (ಕೆವಿಯಟ್) ಇರುವುದಿಲ್ಲ. ಆದ್ದರಿಂದ ಈ ಮುಂದಿನಂತೆ ಆದೇಶಿಸುತ್ತೇನೆ.

**ಆ ದೇ ಶ**

ಪ್ರತಿವಾದಿಯರಿಗೆ ತುರ್ತು ನೋಟಿಸ್ ಹಾಗೂ ದಾವಾ ಸಮನ್ಸ್ ರವಾನಿಸಲು ಕಛೇರಿಗೆ ನಿರ್ದೇಶಿಸಲಾಗಿದೆ.

**ಮುಂದಿನ ವಿಚಾರಣೆ ದಿನಾಂಕ** 15.02.2025.

ಸಹಿ ಇದೆ.

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಮ್.ಎಫ್.ಸಿ., ನ್ಯಾಯಾಲಯ, ಹೊನ್ನಾವರ.**